155-330-3

08/03/2025

# ಕರ್ನಾಟಕ ವಿಧಾನ ಪರಿಷತ್ತು

## 330 ನೇ ನಿಯಮದ ಮೇರೆಗೆ ಸೂಚನೆ

**ಆಡಳಿತ ಪಕ್ಷದವರು 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆ ಅಡಿ ಕಳೆದ 19 ವರ್ಷಗಳಿಂದ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಲ್ಯಾಬ್ ಟೆಕ್ನೀಷಿಯನ್, ಸ್ಟಾಫ್ ನರ್ಸ್ ಹಾಗೂ ಆಯುಷ್ ವೈದ್ಯರುಗಳನ್ನು ಖಾಯಂಗೊಳಿಸುವ ಬಗ್ಗೆ, ಮಾನ್ಯ ಶ್ರೀ ಎಸ್ ವಿ ಸಂಕನೂರ, ವಿಧಾನ ಪರಿಷತ್ತು ಸದಸ್ಯರು, ರವರು ನಿಯಮ 330 ರಲ್ಲಿ ಕೋರಿರುವ ಪ್ರಶ್ನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಉತ್ತರ:-**

ರಾಷ್ಟ್ರೀಯ ಆರೋಗ್ಯ ಅಭಿಯಾನವು 2005 ರಲ್ಲಿ ಪ್ರಾರಂಭವಾದ ಒಂದು ಪ್ರಮುಖ ಆರೋಗ್ಯ ಕ್ಷೇತ್ರವನ್ನು ಬಲಪಡಿಸುವ ಒಂದು ಸುಧಾರಣಾ ಉಪಕ್ರಮವಾಗಿದೆ. ಈ ಯೋಜನೆಯು ತಾತ್ಕಾಲಿಕ ಕಾಲಬದ್ಧವಾದ ಕೇಂದ್ರ ಸರ್ಕಾರದ ಅಭಿಯಾನವಾಗಿದ್ದು, ಆರೋಗ್ಯ ಇಲಾಖೆಯ ವಿವಿಧ ಕಾರ್ಯಕ್ರಮಗಳಿಗೆ ಪೂರಕವಾಗಿ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸುವ ಸಲುವಾಗಿ ಅನುದಾನಗಳನ್ನು ಒದಗಿಸಲಾಗುತ್ತಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಒಟ್ಟು 24,507 ಒಳಗುತ್ತಿಗೆ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ಗುತ್ತಿಗೆ ಸಿಬ್ಬಂದಿಗಳ ಕನಿಷ್ಠ ಕಾರ್ಯಕ್ಷಮತೆ ಮಾನದಂಡಗಳ ಮೂಲಕ ಕಾರ್ಯಕ್ಷಮತೆಯ ಮೌಲ್ಯಮಾಪನ ಪ್ರಕ್ರಿಯೆಯನ್ನು ಕೈಗೊಂಡು ಸದರಿ ಸಿಬ್ಬಂದಿಯ ಸೇವೆಯು ತೃಪ್ತಿಕರವಾಗಿದ್ದಲ್ಲಿ ಗುತ್ತಿಗೆ ಸಿಬ್ಬಂದಿಗಳನ್ನು ಮುಂದಿನ ಆರ್ಥಿಕ ವರ್ಷಕ್ಕೆ ನಿಯಮಾನುಸಾರ ಷರತ್ತುಗಳನ್ವಯ ಪ್ರತಿ ವರ್ಷ ಮುಂದುವರೆಸಲಾಗುತ್ತಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಅನುಮೋದನೆಯಾದ ಲ್ಯಾಬ್ ಟೆಕ್ನೀಷಿಯನ್, ಸ್ಟಾಫ್ ನರ್ಸ್ ಮತ್ತು ಆಯುಷ್ ವೈದ್ಯರ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

| ಕ್ರ. ಸಂ | ಹುದ್ದೆ | ಮಂಜೂರಾದ ಹುದ್ದೆ | ಕಾರ್ಯ ನಿರತ ಹುದ್ದೆ | ಖಾಲಿ ಹುದ್ದೆ |
|---|---|---|---|---|
| 1. | ಲ್ಯಾಬ್ ಟೆಕ್ನೀಷಿಯನ್ | 1432 | 1383 | 49 |
| 2. | ಸ್ಟಾಫ್ ನರ್ಸ್ | 9047 | 7858 | 1189 |
| 3. | ಆಯುಷ್ ವೈದ್ಯರು | 1539 | 1472 | 67 |

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸಲು, 2022-23 ನೇ ಸಾಲಿನಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು, ಸರ್ಕಾರವು ಮನವಿಯನ್ನು ಪರಿಗಣಿಸಿ ದಿನಾಂಕ: 01.04.2023 ರಿಂದ ಜಾರಿಗೆ ಬರುವಂತೆ ಶೇ 15% ರಷ್ಟು ವೇತನ ಹೆಚ್ಚಿಸಿ ಆದೇಶಿಸಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಈ ಯೋಜನೆಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಅಭಿಯಾನದ ಅನುಷ್ಠಾನಕ್ಕೆ ಪಡೆದಿದ್ದು, ಅಭಿಯಾನ ಮುಕ್ತಾಯವಾದರೆ ಇವರ ನೇಮಕಾತಿಯು ಮುಕ್ತಾಯಗೊಳ್ಳುವ ಹಿನ್ನಲೆಯಲ್ಲಿ ಇವರುಗಳನ್ನು ರಾಜ್ಯ ಸರ್ಕಾರದಲ್ಲಿ ಜಾರಿಯಲ್ಲಿರುವ ಸೇವಾ ನಿಯಮಗಳಂತೆ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಆದಾಗ್ಯೂ, ಇತರ ಇಲಾಖೆಗಳ ಗುತ್ತಿಗೆ ನೌಕರರ ಖಾಯಂಯಾತಿ ಬಗ್ಗೆ ಸರ್ಕಾರವು ಸಕರಾತ್ಮಕ ನಿರ್ಣಯ ತೆಗೆದುಕೊಂಡಾಗ, ಅದನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ನೌಕರರಿಗೂ ವಿಸ್ತರಿಸಲಾಗುವುದು.

ಕಡತ 4 ಎಸ್ ಟಿಕೆಟ್ಟು 2025 (99-1)

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು